ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ. ನಂ.**1534/2019.**

ದಿನಾಂಕ:**16-12-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಮಂಜುನಾಥ ಎಸ್ ಜೆ | ಚಾಸಾ-8<br>ಪ್ರಾಸಾ-4 |
| ತಂದೆಯ ಹೆಸರು | ಜಯಾನಾಯ್ಕ | |
| ವಯಸ್ಸು | 39 ವರ್ಷ | |
| ಉದ್ಯೋಗ | ಹೆಚ್ ಸಿ, ಮಹಿಳಾ ಪೊಲೀಸ್ ಠಾಣೆ,<br>ಚಿಕ್ಕಮಗಳೂರು ನಗರ. | |
| ವಾಸ | ಚಿಕ್ಕಮಗಳೂರು | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:

ನಾನು 2014 ರಿಂದ 2022 ರವರೆಗೆ ಪೊಲೀಸ್ ಠಾಣೆಯಲ್ಲಿ ಪಿ ಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.11.2018 ರಂದು ನಾನು ಠಾಣೆಯಲ್ಲಿ ಕರ್ತವ್ಯದಲ್ಲಿ ಇದ್ದಾಗ ಚಾಸಾ 10 ರವರು ಠಾಣಾ ಮೊಕದ್ದಮೆ ಸಂಖ್ಯೆ 203/2018 ರ ಆರೋಪಿತರ ಪತ್ತೆಗೆಂದು ನನ್ನನ್ನು ಮತ್ತು ಚಾಸಾ 4, 7 ರವರನ್ನು ನೇಮಿಸಿ ಆದೇಶಿಸಿರುತ್ತಾರೆ. ಅದರಂತೆ ನಾವು ಅದೇ ದಿನ ಬೆಳಗ್ಗೆ 11.15 ಕ್ಕೆ ಠಾಣೆಯಿಂದ ಹೊರಟು ಆರೋಪಿತರು ಇದ್ದಾರೆ ಎಂದು ಮಾಹಿತಿ ಇದ್ದ ಸ್ಥಳವಾದ ಗೆದ್ಲೆಹಳ್ಳಿ ಗ್ರಾಮಕ್ಕೆ 11.30 ಕ್ಕೆ ಹೋಗಿ ನೋಡಿದಾಗ, ಅಲ್ಲಿ ಬಸ್ಸು ನಿಲ್ದಾಣದ ಬಳಿ ಆರೋಪಿತರು ನಿಂತಿದ್ದರು. ನಾವುಗಳು ಸುತ್ತುವರಿದು ಆರೋಪಿತರನ್ನು ಹಿಡಿದಿರುತ್ತೇವೆ. ಅವರ ಪೈಕಿ ನಾನು 3 ನೇ ಆರೋಪಿಯನ್ನು, ಚಾಸಾ 4 ರವರು 1 ನೇ ಆರೋಪಿಯನ್ನು, ಚಾಸಾ 7 ರವರು 2 ನೇ ಆರೋಪಿಯನ್ನು ಹಿಡಿದಿರುತ್ತೇವೆ.

1 ರಿಂದ 3 ನೇ ಆರೋಪಿತರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿದರು, ಆದರೆ ಅವರ ಹೆಸರು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

ಪಾಟೀಸವಾಲು: ಆರೋಪಿತರ ಪರ ಶ್ರೀ.ಸಿ ವಿ ಎಸ್ ವಕೀಲರಿಂದ

ದಯಾನಂದ, ನಾಗೇಶ್, ರಂಗಸ್ವಾಮಿ ಯಾರು ಯಾರು ಎಂದು ಗುರುತಿಸಲು ಸಾದ್ಯವೇ ಎಂದರೆ ನಾನು ರಂಗಸ್ವಾಮಿಯನ್ನು ಗುರುತಿಸಬಲ್ಲೆ. ನಾವು ಇಲಾಖಾ ವಾಹನದಲ್ಲಿ ಗೆದ್ಲೆಹಳ್ಳಿಗೆ ಹೋಗಿರುತ್ತೇವೆ. ಗೆದ್ಲೆಹಳ್ಳಿ ಬಸ್ಸು ನಿಲ್ದಾಣವು ದೇವಸ್ಥಾನದ ಎದುರುಗಡೆ ಇದೆ ಅಂದರೆ ಬಾಣಾವಾರದ ಕಡೆಯಿಂದ ಕಡೂರಿಗೆ ಬರುವಾಗ ಬಸ್ಸು

ನಿಲ್ದಾಣವು ಎಡಬದಿಗೆ ಇದೆ. ಗೆದ್ಲೆಹಳ್ಳಿ ಗ್ರಾಮದಲ್ಲಿ ಬಸ್ಸು ನಿಲ್ದಾಣದ ಕಟ್ಟಡ ಇರುವುದಿಲ್ಲ ಅಲ್ಲಿ ಒಂದು ಮರ ಮಾತ್ರ ಇದ್ದು ಅಲ್ಲಿಯೇ ಜನ ಬಸ್ಸು ಹತ್ತುವುದು - ಇಳಿಯುವುದು ಮಾಡುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ಒಂದು ಹಳೆಯ ಬಸ್ಸು ನಿಲ್ದಾಣ ಇದೆ ಎಂದು ನುಡಿಯುತ್ತಾರೆ.

ನಾವು ಜೀಪ್ ಅನ್ನು ರಸ್ತೆಯ ಎಡ ಬದಿ ನಿಲ್ಲಿಸಿರುತ್ತೇವೆ. ನಾವು ಬಸ್ಸು ನಿಲ್ದಾಣದ ಬಳಿ ಹೋದಾಗ ಅಲ್ಲಿ 3 ಜನ ಆರೋಪಿತರು ಮತ್ತು ಇತರ 3-4 ಜನರು ಇದ್ದರು. ನಾವು ಬಸ್ಸು ನಿಲ್ದಾಣಕ್ಕೆ ಹೋಗುವ ಮೊದಲು 1 ರಿಂದ 3ನೇ ಆರೋಪಿತರು ಇವರೇ ಎಂದು ಕಂಡುಹಿಡಿಯಲು ನಮ್ಮ ಬಳಿ ಫೋಟೋ ಇರಲಿಲ್ಲ. ನಾವು ನನ್ನ ಹೇಳಿಕೆಯಲ್ಲಿ ಆರೋಪಿತರನ್ನು ಹಿಡಿದು ಚಾಸಾ 10 ರವರ ಮುಂದೆ ಹಾಜರುಪಡಿಸಿದ್ದು ಅವರು ಹೆಸರು ವಿಳಾಸ ಕೇಳಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ಚಾಸಾ 10 ರವರ ಮುಂದೆ ಹಾಜರುಪಡಿಸುವ ಮುನ್ನ ನಮ್ಮ ಬಳಿ ಇವರೇ 1 ರಿಂದ 3ನೇ ಆರೋಪಿತರು ಎಂದು ಕಂಡುಹಿಡಿಯಲು ನಮ್ಮ ಬಳಿ ದಾಖಲೆ ಇರಲಿಲ್ಲ ಎಂದರೆ ಸರಿ. ನಾನು ಆರೋಪಿಯನ್ನು ವಶಕ್ಕೆ ಪಡೆದಾಗ ಅವರ ಬಳಿ ವಿಚಾರಣೆ ಮಾಡಿರುವುದಿಲ್ಲ ಮತ್ತು ಅವರ ಆಧಾರ್ ಕಾರ್ಡ್ ಅನ್ನು ಕೇಳಿರುವುದಿಲ್ಲ. ಇವರೇ ಆರೋಪಿತರು ಎಂದು ಹೇಳಲು ಚಾಸಾ 10 ರವರ ಬಳಿ ದಾಖಲೆ ಇರಲಿಲ್ಲ ಆದರೆ ಮಾಹಿತಿ ಇತ್ತು. ಚಾಸಾ 10 ರವರಿಗೆ ಮೊದಲೇ ಮಾಹಿತಿ ಇದ್ದಲ್ಲಿ ಹಿಡಿದು ತಂದ ವ್ಯಕ್ತಿಗಳನ್ನು ಪುನಾ ವಿಚಾರಣೆ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ. ನಾನು ಆರೋಪಿತರನ್ನು ದಸ್ತಗಿರಿ ಮಾಡಲು ಹೋಗಿಲ್ಲ, ಚಾಸಾ 10 ರವರ ಮಾತು ಕೇಳಿ ಸುಳ್ಳು ಹೇಳಿಕೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.